ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

(ಅ) ಕರ್ನಾಟಕ ರಾಜ್ಯದಲ್ಲಿ ನಗರ ಭೂ ಪರಿಮಿತಿ ಕಾಯ್ದೆ ದಿನಾಂಕ ೧೭-೨-೧೯೭೬ರಿಂದ ಜಾರಿಗೆ ಬಂದಿದೆ.

(ಆ) ನಗರ ಭೂ ಪರಿಮಿತಿ ಕಾಯ್ದೆಯಲ್ಲಿ ವ್ಯಾಖ್ಯಾನಿಸಿರುವಂತೆ ನಗರ ಸಮುಚ್ಚಯದ ಪರಿಮಿತಿಯೊಳಗೆ ಬರುವಂತಹ ವ್ಯವಸಾಯ ಮತ್ತು ವ್ಯವಸಾಯೇತರ ಖಾಲಿ ಜಮೀನು ಎರಡಕ್ಕೂ ಈ ಕಾಯ್ದೆಯು ಅನ್ವಯವಾಗುತ್ತದೆ.

(ಇ) ರಾಜ್ಯದಲ್ಲಿ (ಚದರ ಮೀಟರ್‌ಗಳಲ್ಲಿ)

		ವ್ಯವಸಾಯ	ವ್ಯವಸಾಯೇತರ
(೧)	೧೯೮೭	೧೦,೫೯,೩೮೧,೮೯	೪೯,೫೫,೪೨೭.೮೧
(೨)	೧೯೮೮	೮,೪೩,೩೦೩.೧೬	೧೩,೪೪,೦೭೯.೪೫
(೩)	೧೯೮೯	೧,೫೧,೭೫೫.೮೩	೩,೮೩,೦೮೮.೪೬
(೪)	೧೯೯೦	೧,೧೦,೨೪೪.೭೭	೨,೫೭,೬೬೧.೫೪
	ಒಟ್ಟು	೨೧,೬೪,೬೮೫.೬೫	೬೯,೪೦,೨೫೭.೨೬

ಬೆಂಗಳೂರು ನಗರ ಸಮುಚ್ಚಯ

(೧)	೧೯೮೭	೭,೦೪,೨೪೮,೩೬	೩೬,೯೩,೪೪೪.೧೩
(೨)	೧೯೮೮	೩,೮೧,೮೯೫.೨೯	೫,೮೫,೭೬೮.೧೦
(೩)	೧೯೮೯	೭೭,೪೫೮.೬೧	೨,೭೬,೬೭೭.೫೪
(೪)	೧೯೯೦	೮೪,೨೧೪.೯೫	೨,೧೮,೪೧೯.೦೦
	ಒಟ್ಟು	೧೨,೪೭,೪೮೭.೨೧	೪೭,೭೪,೨೫೮.೭೭

(ಈ) ಅನೇಕ ಪ್ರಕರಣಗಳಲ್ಲಿ ವಿನಾಯಿತಿ ನೀಡಿಕೆಯಲ್ಲಿ ಆಕ್ರಮಗಳು ಅಥವಾ ಅನೌಚಿತ್ಯಗಳು ನಡೆದಿರುವುದು ಈ ಸರ್ಕಾರದ ಗಮನಕ್ಕೆ ಬಂದಿದ್ದರೂ ಸಹ ಈ ವಿನಾಯ್ತಿಗಳು ಸ್ವಭಾವತಃ ನ್ಯಾಯಿಕ ಸ್ವರೂಪಗಳಾದ್ದರಿಂದ ಇವುಗಳನ್ನು ಪುನರ್ ಪರಿಶೀಲಿಸಲು ಅವಕಾಶವಿರುವುದಿಲ್ಲ, ಆದಾಗ್ಯೂ ಮೂಲ ವಿನಾಯ್ತಿಗಳು ಆಕ್ರಮವಾದವುಗಳು ಅಥವಾ ಅನೌಚಿತ್ಯವಾದವುಗಳೆಂದು ಪರಿಗಣಿಸಲ್ಪಟ್ಟಿರೆ, ಅಂತಹ ವಿನಾಯ್ತಿಗಳ ಊರ್ಜಿತತ್ವದ ಕಾಲಾವಧಿಯು ಮುಗಿದ ಮೇಲೆ ಸರ್ಕಾರವು ಹೆಚ್ಚಿನ ಕಾಲಾವಧಿ ವಿಸ್ತರಣೆಯನ್ನು ತಿರಸ್ಕರಿಸುತ್ತಿದೆ.

ನೆರೆ ರಾಜ್ಯಗಳಿಂದ ಪರಭಾಷಿಯರು ಕರ್ನಾಟಕಕ್ಕೆ ವಲಸೆ ಬರುತ್ತಿರುವುದು

೧೬೩. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಕರ್ನಾಟಕಕ್ಕೆ ನೆರೆರಾಜ್ಯಗಳಿಂದ ಪರಭಾಷಿಯರು ವಲಸೆ ಬರುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

(ಆ) ಹಾಗಿದ್ದಲ್ಲಿ ವಲಸೆ ಬರುವುದನ್ನು ತಡೆಯಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು;

(ಇ) ನೆರೆರಾಜ್ಯಗಳಿಂದ ಎಷ್ಟು ಜನರು ವಲಸೆ ಬಂದಿದ್ದಾರೆ ಎಂದು ಅಂದಾಜು ಮಾಡಲಾಗಿದೆ;

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

ಅ) ಹೌದು

ಆ) ಯಾವುದೂ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ.

ಇ) ಅಂದಾಜು ಮೂಡಿಲ್ಲ.

ರಾಜ್ಯದಲ್ಲಿ ಭೂ ಮಾಪನ ಕಾರ್ಯವನ್ನು ವ್ಯಾಪಕವಾಗಿ ನಡೆಸುವುದು

೯೯೩. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ರಾಜ್ಯದಲ್ಲಿ ಭೂ ಮಾಪನ (ಲ್ಯಾಂಡ್ ಸರ್ವೆ) ವ್ಯಾಪಕವಾಗಿ ನಡೆದು ಎಷ್ಟು ವರ್ಷ ಗಳಾದವು;

ಆ) ರಾಜ್ಯದಲ್ಲಿ ಸರ್ವೆ ದಾಖಲೆಗಳಲ್ಲಿ ಏಕರೂಪತೆ ಹಾಗೂ ಆಧುನಿಕತೆ ತರಲು ಕಂದಾಯ ಇಲಾಖೆ ಕೈಗೊಂಡ ಕಾರ್ಯಕ್ರಮವೇನು;

ಇ) ರಾಜ್ಯದಲ್ಲಿ ಪ್ರತಿ ಗ್ರಾಮಕ್ಕೂ ಭೂಪಟ (ಮ್ಯಾಪ್) ಹೊಂದಲು ಸರ್ವೆ ಇಲಾಖೆ ಕ್ರಮ ಕೈಗೊಳ್ಳುವುದೇ;

ಈ) ಜಮೀನು ಅಳತೆ ಮಾಡಲು ಗ್ರಾಮೀಣ ಯುವಕರಿಗೆ ತರಬೇತಿ ನೀಡಲು ಸರ್ವೆ ಇಲಾಖೆ ಕ್ರಮ ಕೈಗೊಳ್ಳುವುದೆ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ಈಗ್ಗೆ ಸುಮಾರು ೧೦೦ ವರ್ಷಗಳ ಮೇಲ್ಪಟ್ಟು ಆಗಿರುತ್ತದೆ.

ಆ) ೧. ಗ್ರಾಮ ನಕಾಶೆಗಳನ್ನು ಹಾಗೂ ನಗರ ಮಾಪನ ನಕಾಶೆಗಳನ್ನು ತ್ವರಿತವಾಗಿ ಮತ್ತು ಕರಾರುವಾಕ್ಕಾಗಿ ಮುದ್ರಿಸಲು ಹೊಸ ಮುದ್ರಣ ಯಂತ್ರವನ್ನು ಹಿಂದೂಸ್ತಾನ್ ಮೆಷಿನ್ಸ್ ಟೂಲ್ಸ್ ಕಂಪನಿಯವರಿಂದ ಖರೀದಿಸಿದೆ.

೨. ಮೈಸೂರು ಸರ್ವೆ ಸೆಟಲ್‌ಮೆಂಟ್ ತರಬೇತಿ ಕೇಂದ್ರವನ್ನು ಬಲವರ್ಧಿಸಿ ಭೂಮಾಪಕರಿಗೆ ಆಧುನೀಕೃತ ಉಪಕರಣಗಳಿಂದ ಕರಾರುವಾಕ್ಕಾಗಿ ಅಳತೆ ಮಾಡುವ ತರಬೇತಿ ಕೊಡಲು ಪ್ರಸ್ತಾಪಿಸಿದೆ.

೩) ಭೂಮಾಪನ ಇಲಾಖೆಯ ಅಧಿಕಾರಿಗಳು ನೌಕರರ ತರಬೇತಿಗಾಗಿ ಹೈದರಾಬಾದಿನಲ್ಲಿ ಇರುವ ಭಾರತೀಯ ಸರ್ವೇಕ್ಷಣಾ ತರಬೇತಿ ಕೇಂದ್ರಕ್ಕೆ ನಿಯೋಜಿಸಲಾಗುತ್ತಿದೆ.

ಇ) ಹೌದು.

ಈ) ಸದ್ಯದ ಪರಿಸ್ಥಿತಿಯಲ್ಲಿ ಇಲ್ಲ.

ಪ್ರಧಾನಿಯವರ ಕರ್ನಾಟಕ ಪ್ರವಾಸದ ಖರ್ಚಿನ ವಿವರಗಳು

೧೦೩೭. ಶ್ರೀ ಕೆ. ಪ್ರತಾಪ್ ಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ.—

೧. ದಿನಾಂಕ ೧೦–೫–೧೯೮೦ರಂದು ಮಾನ್ಯ ಪ್ರಧಾನ ಮಂತ್ರಿಯವರು ಕರ್ನಾಟಕ ಪ್ರವಾಸ ಮಾಡಿದ ಸಂದರ್ಭದಲ್ಲಿ ರಕ್ಷಣೆ ಹಾಗೂ ವಿವಿಧ ಬಾಬುಗಳಿಗೆ ಮಾಡಿದ ಖರ್ಚಿನ ವಿವರಗಳನ್ನು ನೀಡುವುದು

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

(೧) ರಕ್ಷಣೆಗಾಗಿ ರೂ. ೪,೬೮,೬೯೪—೬೦

(೨) ವಿವಿಧ ಬಾಬ್ತು ರೂ. ೧,೧೩,೬೩೪—೭೫